# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ದೂರವಾಣಿ ಸಂ.08354-230276
ಫ್ಯಾಕ್ಸ್ ನಂ.08354-230300
ಮೊ.ಸಂ.9480696389
ಈಮೇಲ್: registrar@uhsbagalkot.edu.in

ಕುಲಸಚಿವರ ಕಛೇರಿ,
ಉದ್ಯಾನಗಿರಿ
ನವನಗರ,
ಬಾಗಲಕೋಟ-587104

ಸಂಖ್ಯೆ:ಕುಸ/ತೋವಿವಿ/ಜೇ.ಪ./ 1022 /2021-22 ದಿನಾಂಕ: 07.01.2022

## ಸುತ್ತೋಲೆ

**ವಿಷಯ** : **ದಿನಾಂಕ 31.12.2021** ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಕುರಿತು.

**ಉಲ್ಲೇಖ** :
1. ತೋವಿವಿ, ಬಾಗಲಕೋಟದ ವೃಂದ ಮತ್ತು ನೇಮಕಾತಿ ನಿಯಮ-5.
2. ಈ ಕಛೇರಿ ಅಧಿಸೂಚನೆ ಸಂ:ಕುಸ/ತೋವಿವಿಬಾ/ನೇವಿ/ಹೈ-ಕ/1002/2021-22 ದಿನಾಂಕ: 05.01.2022.
3. ಮಾನ್ಯ ಕುಲಪತಿಗಳು, ತೋವಿವಿ, ಬಾಗಲಕೋಟ ಇವರ ಅನುಮೋದನೆ ದಿನಾಂಕ: 07.01.2022.

*****

ಮೇಲಿನ ವಿಷಯ ಹಾಗೂ ಉಲ್ಲೇಖಗಳನ್ವಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿವಿಧ ಹುದ್ದೆಗಳಲ್ಲಿ **ದಿನಾಂಕ: 31.12.2021** ರಂದು ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕೇತರ ನೌಕರರ ಈ ಕೆಳಗಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮ 5 ರ ಹಾಗೂ ಉಲ್ಲೇಖ (2) ರ ಅಧಿಸೂಚನೆಯ ಅನುಸಾರ ತಯಾರಿಸಿ ಎಲ್ಲಾ ಸಿಬ್ಬಂದಿಯವರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

1. **ದಿನಾಂಕ 31.12.2021 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿ (ಮಿಕ್ಕುಳಿದ ಮಾತೃ ವೃಂದ) – *ಅನುಬಂಧ-1.***
2. **ದಿನಾಂಕ 31.12.2021 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿ (ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ) – *ಅನುಬಂಧ-2.***
3. **ದಿನಾಂಕ 31.12.2021 ರಂದು ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಕೇತರ ನೌಕರರ ತಾತ್ಕಾಲಿಕ ಸಮಗ್ರ ಜೇಷ್ಠತಾ ಪಟ್ಟಿ (ಮಿಕ್ಕುಳಿದ ಮಾತೃ ವೃಂದ ಹಾಗೂ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ ಕ್ರೋಢೀಕೃತ) – *ಅನುಬಂಧ-3.***

ಸಂಬಂಧಪಟ್ಟ ನೌಕರರು ತಮ್ಮ ವಿವರಗಳು ಸರಿಯಾಗಿದೆಯೇ ಎಂದು ನೋಡಿಕೊಳ್ಳುವುದು ಮತ್ತು ಸದರಿ ಜೇಷ್ಠತಾ ಪಟ್ಟಿಯಲ್ಲಿ ಏನಾದರೂ ತಿದ್ದುಪಡಿ ಮಾಡಬೇಕಾಗಿದ್ದರೆ, ಈ ಸುತ್ತೋಲೆ ಹೊರಡಿಸಿದ 15 ದಿನಗಳ ಒಳಗಾಗಿ ಮುಖ್ಯಸ್ಥರುಗಳ ಮುಖಾಂತರ ಸೂಕ್ತ ದೃಢೀಕೃತ ದಾಖಲೆಗಳೊಂದಿಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು, ನಿಗದಿತ ದಿನಾಂಕದೊಳಗಾಗಿ ಯಾವುದೇ ಮಾಹಿತಿಯು ಸ್ವೀಕೃತವಾಗದಿದ್ದಲ್ಲಿ ಸದರಿ ಜೇಷ್ಠತಾ ಪಟ್ಟಿಯು ಸರಿಯಾಗಿದೆ ಎಂದು ಭಾವಿಸಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಸದರಿ ಜೇಷ್ಠತಾ ಪಟ್ಟಿಯು ತೋವಿವಿ, ಬಾಗಲಕೋಟೆಯ ವೆಬ್‌ಸೈಟ್ **https://uhsbagalkot.karnataka.gov.in** ನಲ್ಲಿ ಲಭ್ಯವಿರುತ್ತದೆ.

**ಕುಲಸಚಿವರು**
**ತೋವಿವಿ, ಬಾಗಲಕೋಟ**

**ಇವರಿಗೆ,**

1. ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು.
2. ಡೀನ್‌ಗಳು, ತೋಟಗಾರಿಕೆ ಮಹಾವಿದ್ಯಾಲಯಗಳು, ತೋ.ವಿ.ವಿ., ಬಾಗಲಕೋಟ.
3. ಸಹ ಸಂಶೋಧನಾ ವಿಸ್ತರಣಾ ನಿರ್ದೇಶಕರು, ಎಮ್.ಎಚ್.ಆರ್.ಈ.ಸಿ., ತೋ.ವಿ.ವಿ., ಬಾಗಲಕೋಟ.
4. ಮುಖ್ಯಸ್ಥರು, ತೋಟಗಾರಿಕೆ ಸಂಶೋಧನಾ ಹಾಗೂ ವಿಸ್ತರಣಾ ಘಟಕಗಳು, ತೋ.ವಿ.ವಿ., ಬಾಗಲಕೋಟ.
5. ಮುಖ್ಯಸ್ಥರು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ ಕೇಂದ್ರಗಳು, ತೋ.ವಿ.ವಿ., ಬಾಗಲಕೋಟ.
6. ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ.

(1–5) ಇವರುಗಳಿಗೆ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಶಿಕ್ಷಕೇತರ ನೌಕರರಿಗೆ ತಿಳಿಸಲು ಕೋರಿದೆ.

ಪ್ರತಿ: ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟ.